## ದೆವ್ವಕ್ಕೆ ಹೆದರಿಕೆ

ಅಕ್ಕನ ನಾಲ್ಕು ವರ್ಷದ ಮಗ ವರ್ಷಿತ್ ರಾತ್ರಿ ಬೇಗ ಮಲಗಲಿಲ್ಲ. ಅವನನ್ನು ಮಲಗಿಸಲು ಅಕ್ಕ ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದವು. ಕೊನೆಗೆ ಅವಳು, 'ಹೊರಗ ದೆವ್ವ ಬಂದದ ನೋಡು, ಅಲ್ಲೇ ಮೆಟ್ಟಿಲ ಹತ್ರ, ಕತ್ತಲದಾಗ ಕುಂತದ. ಲಗೂ ಮಲ್ಕೊ. ಇಲ್ಲಾಂದ್ರ ಒಳಗ ಬರ್ತದ' ಎಂದು ಗದರಿಸಿದಳು. ಕಿಟಕಿಯಿಂದ ಆಚೆ ನೋಡಿದ ವರ್ಷಿತ್, ಹೊರಗಡೆಯ ಲೈಟುಗಳೆಲ್ಲಾ ಆರಿದ್ದನ್ನು ನೋಡಿ, 'ಹೊರಗ ಲೈಟ್ ಹಾಕಮ್ಮಾ. ಕತ್ತಲದಾಗ ದೆವ್ವಕ್ಕ ಹೆದರಿಕೆ ಆಗ್ತದ, ಪಾಪ.' ಅಂದಾಗ ಮನೆಯವರೆಲ್ಲಾ ನಕ್ಕಿದ್ದೇ ನಕ್ಕಿದ್ದು.

**ನರಸಿಂಹಾರೆಡ್ಡಿ ಯಂಕಾಮೊಳ**





## ಲೊಕೇಶನ್

ಇದು ನನ್ನ ಸ್ನೇಹಿತೆಯೊಬ್ಬಳಿಗಾದ ಅನುಭವ. ಮದುವೆ ಮುಂಜಿ, ಮಂಗಲಕಾರ್ಯಗಳ ಸೀಸನ್ ಪ್ರಾರಂಭವಾದ ಸಮಯವದು. ನನ್ನ ಗೆಳತಿ ಚಿತ್ರಾ ತನ್ನ ಸಂಬಂಧಿಕರೊಬ್ಬರ ಗೃಹಪ್ರವೇಶಕ್ಕೆ ಹೋಗುವ ತಯಾರಿಯಲ್ಲಿದ್ದಳು. ಆಮಂತ್ರಣ ಪತ್ರಿಕೆ ನೋಡುತ್ತಲೇ ಅವಳು ತನ್ನ ಗೆಳತಿಗೆ ಫೋನ್ ಮಾಡಿ, 'ರೆಡಿಯಾಗಿದ್ದೀನಿ, ಸ್ವಲ್ಪ ಲೊಕೇಶನ್ ಕಳಿಸ್ತಿಯಾ?' ಎಂದಳು. ಕೆಲಸಮಯದ ಬಳಿಕ ಗೆಳತಿಯ ಮಗ ಲೋಕೇಶ, 'ಏನು ಆಂಟಿ? ಬರಬೇಕು ಅಂದ್ರಂತೆ?' ಎನ್ನುತ್ತ ಎದುರಿಗೆ ಬಂದು ನಿಂತಾಗ ಚಿತ್ರಾಳಿಗೆ ಗಲಿಬಿಲಿಯಾಯಿತು. ಲೊಕೇಶನ್ ಕಳಿಸಿಕೊಡು ಎಂದರೆ ಗೆಳತಿ ತನ್ನ ಮಗ 'ಲೋಕೇಶ'ನನ್ನೇ ಕಳಿಸಿಕೊಟ್ಟಿದ್ದಳು!

**ಇಂದಿರಾ ಮೋಟೆಬೆನ್ನೂರ**